ಕರ್ನಾಟಕ ಸರ್ಕಾರ
Government of Karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಡಿ ಎಸ್ ಇ ಆರ್ ಟಿ DSERT
DEPARTMENT OF STATE EDUCATIONAL RESEARCH AND TRAINING
NO 4, 100 FT RING ROAD, BANASHANKARI 3RD STAGE BENGALURU - 085
E MAIL:dsertkar@gmail.com , Website: http://dsert.kar.nic.in
Phone : 080 26422372 26422373 26422374
Fax:26422377

ಶಿ.ತ2/DSERT/ ಡಯಟ್. ಶೈ.ಸ್ಪಂದನ/03/2015-16 ದಿನಾಂಕ .16.06.2015

## ಬಾಗಲಕೋಟೆ ಜಿಲ್ಲೆಯ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮದ ಸಭಾ ನಡಾವಳಿ

ವಿಷಯ:- ದಿನಾಂಕ16.06.2015 ರಂದು ಶ್ರೀ. ಎಸ್. ಜಯಕುಮಾರ್, ನಿರ್ದೇಶಕರು ಡಿ.ಎಸ್.ಇ.ಆರ್.ಟಿ. ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಡಯಟ್ ಇಲಕಲ್ , ಬಾಗಲಕೋಟೆ ಜಿಲ್ಲೆ ಇಲ್ಲಿ,ಹಮ್ಮಿಕೊಂಡಿದ್ದ ಜಿಲ್ಲಾ ಶೈಕ್ಷಣಿಕ ಸ್ಪಂದನ ಕಾರ್ಯಕ್ರಮದ ಸಭಾ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

| ಕ್ರ.ಸಂ | ಅಧಿಕಾರಿಗಳ ಹೆಸರು ಮತ್ತು ವಿಳಾಸ |
|---|---|
| 1 | ಎಸ್.ಜಯಕುಮಾರ, ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 2 | ಜೆ.ಎಸ್.ಮರೋಳ, ಪ್ರಾಂಶುಪಾಲರು ಡಯಟ್ ಇಲಕಲ್ಲ |
| 3 | ಎನ್.ಎಚ್.ನಾಗೂರ ,ಡಿ.ವಾಯ್.ಪಿ.ಸಿ.,ಎಸ್.ಎಸ್.ಎ. ಬಾಗಲಕೋಟೆ ಜಿಲ್ಲೆ. |
| 4 | ಗಂಗಮಾರೇಗೌಡ, ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 5 | ದ್ರಾಕ್ಷಾಯಣಿ, ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 6 | ಗೀತಾ ಕೆ.ಜಿ. ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 7 | ರಂಗಧಾಮಪ್ಪ. ಸಿ, ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 8 | ಅಂಜಿಲಿನಾ ಕ್ರಿಸ್ಟನ್, ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 9 | ಕುಮಾರಿ ಎಂ.ಫ಼ಿ., ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 10 | ಭಾನುಮತಿ, ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 11 | ಉಷಾ ಎಂ.ಡಿ, ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 12 | ಮಂಜುನಾಥ, ಹಿ.ಸ.ನಿ.ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 13 | ಸಿ.ಆರ್.ಓಣಿ, ಹಿರಿಯ ಉಪನ್ಯಾಸಕರು, ಡಯಟ್ ಇಲಕಲ್ಲ |
| 14 | ಜಿಲ್ಲೆಯ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 15 | ಶ್ರೀ ಜಂಗಿ, ಕಲಾವಿಧರು .ಡಿ.ಎಸ್.ಇ.ಆರ್.ಟಿ ಬೆಂಗಳೂರು |
| 16 | ಡಯಟ್ ಇಲಕಲ್ಲ ಎಲ್ಲ ಹಿರಿಯ/ಉಪನ್ಯಾಸಕರು |
| 17 | ಜಿಲ್ಲೆ ಎಲ್ಲ ವಲಯಗಳ ಕ್ಷೇತ್ರ ಸಮನ್ವಯಾಧಿಕಾರಿಗಳು |
| 18 | ಡಯಟ್ ಇಲಕಲ್ ಕಚೇರಿ ಸಿಬ್ಬಂಧಿ ವರ್ಗ |

ಸಭೆಯು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು, ಶ್ರೀ ಜೆ.ಎಸ್.ಮರೋಳ ಪ್ರಾಂಶುಪಾಲರು , ಡಯಟ್ ಇಲಕಲ್ಲ ರವರು ಸಭೆಗೆ ಸ್ವಾಗತ ಕೋರಿದರು. ನಂತರ ಶ್ರೀ ಜೆ.ಎಸ್.ಮರೋಳ ರವರು ಬರೆದ **"ಶಾಲೆಗೆ ಬನ್ನಿ ಶನಿವಾರ ಕಲಿಕೆಗೆ ನೀಡಿ ಸಹಕಾರ"** ಕವನವನ್ನು ಮಾನ್ಯ ನಿರ್ದೇಶಕರವರಿಂದ ಬಿಡುಗಡೆಗೊಳಿಸಿದರು.

ಮಾನ್ಯ ನಿರ್ದೇಶಕರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ರಾಜ್ಯ ಶಿಕ್ಷಣ ಮತ್ತು ಸಂಶೋಧನೆ ಶಾಖೆಯ ವ್ಯಾಪ್ತಿ, ಮತ್ತು ಕಾರ್ಯಗಳ ಪರಿಚಯ ಮಾಡಿದರು.

**ಶ್ರೀ ಗಂಗಮಾರೇಗೌಡ, ಎಸ್.ಎ.ಡಿ.ಪಿ.ಐ., ಡಿ.ಎಸ್.ಇ.ಆರ್.ಟಿ. ಬೆಂಗಳೂರು**

- ಎಸ್.ಎಸ್.ಎ. ತರಬೇತಿಯಲ್ಲಿ ಬಾಗಲಕೋಟ ಜಿಲ್ಲೆ 28ನೇ ಸ್ಥಾನದ ಸಾಲಿನಲ್ಲಿದೆ.
- ಕಳೆದ 6-8ನೇ ವಿಜ್ಞಾನ ತರಬೇತಿಗೆ ಜಮಖಂಡಿ ತಾಲ್ಲೂಕಿಗೆ 128 ಶಿಕ್ಷಕರನ್ನು ನಿಗದಿಪಡಿಸಲಾಗಿತ್ತು. ಆದರೆ 78 ಜನ ಶಿಕ್ಷಕರಿಗೆ ಮಾತ್ರ ತರಬೇತಿ ನೀಡಲಾಗಿದೆ . ಅದರಂತೆ ಗಣಿತ ತರಬೇತಿಗೆ 609 ಜನ ಶಿಕ್ಷಕರನ್ನು ನಿಗದಿಪಡಿಸಿ 168 ಜನ ಶಿಕ್ಷಕರಿಗೆ ಮಾತ್ರ ತರಬೇತಿ ನೀಡಲಾಗಿದೆ.
- ಬಿ.ಆರ್.ಸಿ. ಜಮಖಂಡಿರವರು ನಿಗದಿಪಡಿಸಿದ ಅಂಕಿ ತಪ್ಪಾಗಿದ್ದು, ಸರಿಯಾದ ಅಂಕಿ ಅಂಶಗಳನ್ನು ಸಭೆಯ ಗಮನಕ್ಕೆ ತಂದರು.
- ಸದರಿ ಅಂಕಿ ಅಂಶ ಡಯಟ್ ಅವರಿಂದ ಸಲ್ಲಿಸಿರುವದರಿಂದ ಸಂಬಂಧಿಸಿದ ನೋಡಲ್ ಅಧಿಕಾರಿಗಳಾದ ಶ್ರೀ ಸಿ.ಆರ್.ಓಣಿ ಹಿರಿಯ ಉಪನ್ಯಾಸಕರಿಗೆ ಮಾನ್ಯ ನಿರ್ದೇಶಕರು, ಇನ್ನು ಮುಂದೆ ಹೀಗಾಗದಂತೆ ನೋಡಿಕೊಳ್ಳಲು ಎಚ್ಚರಿಕೆ ನೀಡಿದರು.
- **ಸರಕಾರಿ ಹೆಣ್ಣು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆ, ರಾಂಪುರ ತಾ:ಬಾಗಲಕೋಟ** ಶಾಲೆಗೆ ಭೇಟಿ ನೀಡಿದೆ. ಶಾಲೆ ಚೆನ್ನಾಗಿದೆ. ಶಿಕ್ಷಕರಿಗೆ ತರಬೇತಿ ನೀಡಿರುವದನ್ನು ಗಮನಿಸಿದಾಗ 5 ದಿನ ನೀಡಬೇಕಾದ ತರಬೇತಿಯನ್ನು 10 ದಿನ ನೀಡಿರುವರು. ಈ ತರಹ ಆಗಬಾರದೆಂದು ತಿಳಿಸಿದರು.
- ಕೆ.ಜಿ.ಎಚ್.ಪಿ.ಎಸ್. ಶಾಲೆಗೆ ಒಂದೇ ಶೌಚಾಲಯವಿದ್ದು ಸ್ವಚ್ಛತೆ ಇಲ್ಲದೇ ಉಪಯೋಗಿಸುವ ಹಂತದಲ್ಲಿಲ್ಲ.
- ಸಿ.ಆರ್.ಪಿ. ರವರು ಭೇಟಿ ನೀಡಿದ ಕುರಿತು ಮತ್ತು ಮಾರ್ಗದರ್ಶನ ನೀಡಿದ ಭೇಟಿ ವರದಿ ಪ್ರತಿ ಒಂದೇ ಮಾಡಿ ತೆಗೆದುಕೊಂಡು ಹೋಗಿರುತ್ತಾರೆ. ಶಾಲೆಗೆ ಪ್ರತಿ ನೀಡಿರುವುದಿಲ್ಲ
- ಅಧಿಕಾರಿಗಳ ಸಂದರ್ಶನ ಪುಸ್ತಕಕ್ಕೆ ಭೇಟಿ ನೀಡಿದ ಕುರಿತು ಯಾವದೇ ಮಾರ್ಗದರ್ಶನ ನೀಡಿದ ಕುರಿತು ವಿವರ ನಮೂದಿಸಿರುವುದಿಲ್ಲದಿರುವದು ಕಂಡು ಬಂದಿದೆ.
- ನಲಿಕಲಿ ಕೋಣೆಗೆ ಭೇಟಿ ನೀಡಿದಾಗ ಬೀಳುವ ಹಂತದಲ್ಲಿದೆ, ಅಕ್ಷರ ದಾಸೋಹ ಕೊಠಡಿಯು ಅಸಮರ್ಪಕವಾಗಿದೆ.
- ಈ ವರ್ಷದ ವಿದ್ಯಾರ್ಥಿಗಳಿಗೆ 2014-15ನೇ ಸಾಲಿನ ಪುಸ್ತಕಗಳನ್ನು ಸರಬರಾಜು ಆಗಿವೆ, 2015ರ ಪುಸ್ತಕಗಳು ಸರಬರಾಜು ಆಗಬೇಕಾಗಿತ್ತು ಎಂದು ಸಭೆಯ ಗಮನಕ್ಕೆ ತಂದರು.
- ಮಾನ್ಯ ನಿರ್ದೇಶಕರವರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಪ್ರಶ್ನಿಸಿದಾಗ, ಕಳೆದ ಸಾಲಿನ ಪುಸ್ತಕಗಳು ಗೋಡಾನದಲ್ಲಿ ಇದ್ದ ಪ್ರಯುಕ್ತ ಬಳಸಿಕೊಳ್ಳಲಾಗಿದೆ, ಈ ವರ್ಷ ಸಂಪೂರ್ಣ ಪುಸ್ತಕಗಳು ಬಂದ ನಂತರ ಮಕ್ಕಳಿಗೆ 2015ರ ಮುದ್ರಣದ ಪುಸ್ತಕಗಳನ್ನು ಪೂರೈಸಲಾಗುವದೆಂದು ತಿಳಿಸಿದರು.
- ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಕೇಂದ್ರವಾದ ಪ್ರಯುಕ್ತ ಬಫ್ಪರ ಸ್ಟಾಕ್ ಬಳಿಸಿಕೊಳ್ಳಲಾಗಿದೆ ಎಂದು ತಿಳಿಸಿದರು.
- ರಾಂಪುರ ಸಿ.ಆರ್.ಸಿ ಗೆ ಭೇಟಿ ನೀಡಿದಾಗ ಸದರಿ ಕಚೇರಿ ಕಟ್ಟಡ ಬೀಗ ಹಾಕಿದ್ದು, ಅದರ ಸುತ್ತಲೂ ಜಾಲಿ ಕಂಠಿ ಬೆಳೆದು ಸದರಿ ಕಚೇರಿ ಉಪಯೋಗಿಸಿಕೊಂಡಿರುವುದಿಲ್ಲ.
- ಸಿ.ಆರ್.ಪಿ.ಗಳಾದ ಶ್ರೀ ಸಿ.ಜಿ.ಜಿಗಳೂರು ಹಾಗೂ ವಿ.ವಾಯ್. ಮಾದರ ರವರು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿಯೇ ತಮ್ಮ ಸಿ.ಆರ್.ಪಿ. ಕೆಲಸ ಕಾರ್ಯನಿರ್ವಹಿಸುತ್ತಿರುವುದು ಕಂಡು ಬಂದಿದೆ.
- ಮಾನ್ಯ ನಿರ್ದೇಶಕರವರು ಸದರಿ ಸಿ.ಆರ್.ಪಿ.ಗಳಿಗೆ ಒಂದು ವಾರ ಕಾಲಾವಕಾಶ ನೀಡಲಾಗಿದೆ. ಅಷ್ಟರಲ್ಲಿ ಅವರು ಸದರಿ ಸಿ.ಆರ್.ಪಿ. ಕಟ್ಟಡವನ್ನು ಸ್ವಂತ ಖರ್ಚಿನಲ್ಲಿ ಶುಚಿಗೊಳಿಸಿ ಬಳಸಬೇಕು ಮತ್ತು ಸಿ.ಆರ್.ಸಿ ಕೆಲಸ ಕಾರ್ಯಗಳನ್ನು ಅಲ್ಲಿಯೇ ಕೈಕೊಳ್ಳಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶಿಸಿದರು. ಕ್ರಮ- ಬಿ.ಇ.ಓ ಗಳು.

- ಡಯಟ್‌ಗೆ ಪ್ಲಾನ್ ಅಪ್ರೂವ್ಡ್ ಮಾಡಲಾಗಿದೆ. ಆದರೆ ತರಬೇತಿಗಳನ್ನು ಸಕಾಲದಲ್ಲಿ ಕೈಗೊಂಡಿರುವುದಿಲ್ಲ. ಮತ್ತು ಎಲ್ಲ ತರಬೇತಿಗಳನ್ನು ಜೂನ್ ಮತ್ತು ಜುಲೈನಲ್ಲಿ ಮುಗಿಸಬೇಕು ಎಂದು ಹೇಳಿದರು.
- ನಿರ್ದೇಶಕರು, ಡಯಟ್‌ನಲ್ಲಿ ಹಿರಿಯ ಉಪನ್ಯಾಸಕರ ಹುದ್ದೆಗಳು ಖಾಲಿಯಿದ್ದು, ಆದರೆ ಉಪನ್ಯಾಸಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರಿಗೆ ಡಯಟ್ ಆಡಳಿತ ಹಿತದೃಷ್ಠಿಯಿಂದ ಇರುವ ಉಪನ್ಯಾಸಕರಿಗೆ ಹೆಚ್ಚುವರಿ ಕೆಲಸಗಳನ್ನು ಹಂಚಿಕೆ ಮಾಡಿ ನಿಗದಿತ ಸಮಯದಲ್ಲಿ ಕೆಲಸಗಳನ್ನು ಮಾಡಲು ಜವಾಬ್ದಾರಿ ವಹಿಸುವುದು– ಕ್ರಮ ಡಯಟ್ ಪ್ರಾಂಶುಪಾಲರು.
- ಎಂ.ಎಚ್.ಆರ್.ಡಿ, ಎಂ.ಆರ್.ಪಿ. ತರಬೇತಿಯನ್ನು ರಾಜ್ಯ ಕಚೇರಿಯಲ್ಲಿ ಜಿಲ್ಲೆಗೆ ಒಬ್ಬರಂತೆ ತರಬೇತಿ ನೀಡಲಾಗುವದು. ಅವರು ತಮ್ಮ ಜಿಲ್ಲಾ ಹಂತದಲ್ಲಿ ತರಬೇತಿ ನೀಡುವುದು.
- ಎಸ್.ಎಸ್.ಎ ತರಬೇತಿಗೆ ನೀಡಿದ ಅನುದಾನದಲ್ಲಿ ಉಳಿಕೆಯಾದ ಎಲ್ಲ ಮೊತ್ತವನ್ನು ಮರುಭರಣಾ ಮಾಡಲು ತಿಳಿಸಲಾಗಿತ್ತು, ಆದರೆ ಈವರೆಗೂ ಇಲಕಲ್ ಡಯಟ್ ಮರುಭರಣಾ ಮಾಡಿರುವುದಿಲ್ಲ.
- ನಿರ್ದೇಶಕರು ತರಬೇತಿಯ ನೋಡಲ್ ಅಧಿಕಾರಗೆ ಏಕೆ ಮರುಭರಣಾ ಮಾಡಿರುವುದಿಲ್ಲವೆಂದು ಪ್ರಶ್ನಿಸಿದರು.
- ಕಚೇರಿಯ ಅಧೀಕ್ಷಕರು ಎಲ್ಲ ತಾಲ್ಲೂಕಾ ಕಚೇರಿಗಳಿಂದ ಸರಿಯಾದ ಸಮಯಕ್ಕೆ ಮರಳಿಭರಣಾ ಮಾಡಿರುವುದಿಲ್ಲ ಅದಕ್ಕಾಗಿ ತಡವಾಗಿದೆ ಎಂದು ಉತ್ತರಿಸಿದರು.
- ನಿರ್ದೇಶಕರವರು ವಿಷಯ ನಿರ್ವಾಹಕರಾದ ಶ್ರೀ ಹೊಳಿಸಾಗರ ಪ್ರ.ದ.ಸ. ರವರಿಗೆ ಕಡತವನ್ನು ಪರಿಶೀಲಿಸಿ, ಎಪ್ರೀಲ್, ಮೇ, ಹಾಗೂ ಜೂನ್ ತಿಂಗಳಿನಲ್ಲಿ ಸಂಪೂರ್ಣ ಹಣ ಎಲ್ಲ ತಾಲ್ಲೂಕಿನಿಂದ ಜಮೆ ಆಗಿರುವುದನ್ನು ದೃಢಪಡಿಸಲಾಯಿತು.
- ಸದರಿ ವಿಷಯದ ವಿಷಯನಿರ್ವಾಹಕರು ತಾವು ಗ್ರಾಮಪಂಚಾಯತ ಚುನಾವಣೆಯ ಕಾರ್ಯದಲ್ಲಿ ಸುಮಾರು ಒಂದು ತಿಂಗಳಿನಿಂದ ಕಾರ್ಯನಿರ್ವಹಿಸಿ, ಈಗ ಕಚೇರಿ ಕೆಲಸಕ್ಕೆ ಹಾಜರಾಗಿರುವೆ, ನಾಳೆಯೇ ಸಂಪೂರ್ಣ ಹಣವನ್ನು ಮರಳಿ ಭರಣಾ ಮಾಡಲಾಗುವದೆಂದು ಮಾನ್ಯರಲ್ಲಿ ವಿನಂತಿಸಿದರು.
- ಮಾನ್ಯ ನಿರ್ದೇಶಕರವರು ವಿಷಯ ನಿರ್ವಾಹಕರು ಅನ್ಯಕಾರ್ಯದ ನಿಮಿತ್ತ ಬೇರೆ ಕೆಲಸದಲ್ಲಿರುವಾಗ ನಿಮ್ಮ ಹತ್ತಿರವಿರುವ ಚಾರ್ಜನ್ನು ಬೇರೆಯವರಿಗೆ ಏಕೆ ಹಸ್ತಾಂತರಿಸಲಿಲ್ಲ? ಹಾಗೂ ಕಚೇರಿ ಅಧೀಕ್ಷಕರಾಗಲಿ ಅಥವಾ ನೋಡಲ್ ಅಧಿಕಾರಿಗಳಾಗಲಿ ಏಕೆ ಕಾರ್ಯನಿರ್ವಹಿಸಲಿಲ್ಲ ಎಂಬುದರ ಕುರಿತು ಕರ್ತವ್ಯ ಲೋಪಕ್ಕೆ ವಿವರಣೆ ಸಲ್ಲಿಸುವಂತೆ ತಿಳಿಸಿದರು.–ಕ್ರಮ ಡಯಟ್ ಪ್ರಾಂಶುಪಾಲರು.
- ಸದರಿಯವರು ಮಾನ್ಯ ನಿರ್ದೇಶಕರವರಿಗೆ ವಿನಂತಿಯೊಂದಿಗೆ ಸದರಿ ಉಳಿತಾಯವಾದ ಅನುದಾನದ ಬಡ್ಡಿ ಹಣವು ಜಮೆ ಆದ ತಕ್ಷಣ ಸಂಪೂರ್ಣವಾಗಿ ಮರಳಿ ಭರಣಾ ಮಾಡಬೇಕೆಂಬ ತಪ್ಪು ನಿರ್ಧಾರದಿಂದ ಹೀಗಾಗಿದೆ ಇನ್ನು ಮುಂದೆ ಹೀಗಾದಂತೆ ಎಚ್ಚರಿಕೆ ವಹಿಸುವುದಾಗಿ ನಿವೇದಿಸಿಕೊಂಡರು.
- ನಿರ್ದೇಶಕರವರು ಶ್ರೀ ಸಿ.ಆರ್.ಓಣಿ, ಹಿರಿಯ ಉಪನ್ಯಾಸಕರು ಹಾಗೂ ತರಬೇತಿ ನೋಡಲ್ ಅಧಿಕಾರಿಗಳಿಗೆ ತರಬೇತಿಗೆ ನಿಗದಿಪಡಿಸಿದ ಅವಧಿಯಲ್ಲಿಯೇ ಕೆಲಸ ಮಾಡಬೇಕು ಇನ್ನೊಮ್ಮೆ ಈ ರೀತಿಯಾದ ಲೋಪ ಕಂಡುಬಂದಲ್ಲಿ ಶಿಸ್ತು ಕ್ರಮಜರುಗಿಸಲು ಸರ್ಕಾರಕ್ಕೆ ವರದಿ ಮಾಡಲಾಗುವುದು, ಜವಾಬ್ದಾರಿಯಿಂದ ಕೆಲಸ ನಿರ್ವಹಿಸಲು ಅಂತಿಮ ಎಚ್ಚರಿಕೆ ನೀಡಿದರು. ಕ್ರಮ –ಡಯಟ್ ಪ್ರಾಂಶುಪಾಲರು .

**ಶ್ರೀ ಆರ್. ಮಂಜುನಾಥ, ಎಸ್.ಎ.ಡಿ.ಪಿ.ಐ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಹೂವನೂರ ತಾ: ಹುನಗುಂದ.**

- ಇಬ್ಬರು ಶಿಕ್ಷಕರು ಬೆಳಿಗ್ಗೆ 10:20 ಗಂಟೆಗೆ ಬಂದರು, ಆದರೆ ಶಾಲೆಯು ಬೆಳಿಗ್ಗೆ 9:45 ಪ್ರಾರಂಭವಾಗಬೇಕು ಮತ್ತು ಇಬ್ಬರು ಶಿಕ್ಷಕರು ತಡವಾಗಿ ಬಂದಿರುವದಕ್ಕೆ ಸಮಂಜಸವಾದ ಉತ್ತರ ನೀಡಲಿಲ್ಲ.
- ಶಾಲೆಯಲ್ಲಿ ದಾಖಲಾತಿ 207 ಹಾಜರಾತಿ 48 ಇರುತ್ತದೆ.

- ನಿರ್ದೇಶಕರು ಸದರಿ ಶಾಲೆಗೆ ತಡವಾಗಿ ಬಂದ ಶಿಕ್ಷಕರಿಗೆ ಎಲ್ಲರಿಗೂ ಎಲ್.ಡಬ್ಲ್ಯೂ.ಪಿ ರಜೆ ಮಾಡಲು ಮತ್ತು ನೋಟೀಸು ಜಾರಿ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.
- ಸದರಿ ಶಾಲೆಯ ನಲಿ-ಕಲಿ ತರಗತಿ ವೀಕ್ಷಿಸಲಾಗಿ ಹಳೆ ಚಪ್ಪರ ಹಾಗೇ ಇದೆ, ಕೋಣೆಯಲ್ಲಿ 1 & 2ನೇ ತರಗತಿ ಮಕ್ಕಳು ಮಾತ್ರ ಇದ್ದರು, ಕೊಠಡಿಗಳು ಬಹಳ ಚಿಕ್ಕದಾಗಿ ಇವೆ, ಮೇಲ್ಛಾವಣಿ ಹಾಳಾಗಿದೆ ಮತ್ತು ಶೈಕ್ಷಣಿಕ ವಾತಾವರಣ ಇರುವುದಿಲ್ಲ.
- ಯೂನಿಸೆಫ್ ನಿಂದ 02 ಟ್ರಂಕ್‌ಗಳನ್ನು ಕೊಟ್ಟಿದ್ದಾರೆ ಅವುಗಳನ್ನು ತೆರೆದು ನೋಡಿರುವುದಿಲ್ಲ.
- ಎಸ್.ಡಿ.ಎಂ.ಸಿ.ಮತ್ತು ಪಾಲಕರ ಜೊತೆ ಒಳ್ಳೆಯ ಭಾಂದವ್ಯ ಇಟ್ಟುಕೊಂಡಿಲ್ಲ. ಹಳೆಯ ಎಸ್.ಡಿ.ಎಂ.ಸಿ. ಮುಂದುವರೆದಿದೆ.
- ಬಿಸಿಊಟವನ್ನು ಚೆನ್ನಾಗಿ ಮಾಡಿ ಬಡಿಸುತ್ತಿಲ್ಲ.
- ಶೌಚಾಲಯ ಸ್ವಚ್ಛತೆ ಇಲ್ಲ, ಹಾಲಿನ ಪುಡಿ ಇಡುವ ಜಾಗೆಯಲ್ಲಿ ಧೂಳು ಸಾಕಷ್ಟು ಇರುವದು ಕಂಡು ಬಂದಿತು ಎಂದು ತಿಳಿಸಿದರು.

ನಿರ್ದೇಶಕರು ಸಂಬಂಧಿಸಿದ ಬಿ.ಇ.ಓ ಪರಿಶೀಲಿಸಿ ಡಿ.ಡಿ.ಪಿ.ಐ ರವರಿಗೆ ವರದಿಮಾಡಲು ಸೂಚಿಸಿದರು.

**ಸರಕಾರಿ ಪ್ರೌಢ ಶಾಲೆ, ಕೂಡಲಸಂಗಮ** ಈ ಶಾಲೆಗೆ ಭೇಟಿ ನೀಡಲಾಯಿತು.

- ಟೆಲಿ ಎಜ್ಯುಕೇಷನ್ ಚೆನ್ನಾಗಿ ನಡೆದಿದೆ.
- ಸದರಿ ಪ್ರೌಢಶಾಲೆಗೆ ಇಂಗ್ಲೀಷ ಶಿಕ್ಷಕರ ಮಂಜೂರಿ ಹುದ್ದೆ ಇರುವುದಿಲ್ಲ. ಆದರೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನಿಯೋಜನೆ ಮೇರೆಗೆ ಇಂಗ್ಲೀಷ ವಿಷಯವನ್ನು ಬೋದನೆಗೆ ಬಳಸಿಕೊಳ್ಳಲಾಗುತ್ತಿದೆ.
- ಸದರಿ ಶಾಲೆಯಲ್ಲಿ ಐ.ಟಿ.ಸಿ.ಫೇಸ್-2 ದಲ್ಲಿ 10+4 ಕಂಪ್ಯೂಟರ್ ಬಳಕೆ ಮಾಡುತ್ತಿದ್ದಾರೆ.
- ವಿಜ್ಞಾನ ನಾಟಕ ಸ್ಪರ್ಧೆಗೆ ಈ ಶಾಲೆಯಿಂದ ಯಾರು ಭಾಗವಹಿಸಿರುವದಿಲ್ಲ.
- ಡಯಟ್‌ನಲ್ಲಿ ಕಂಪ್ಯೂಟರ್ ಲ್ಯಾಬ್ ಇದೆ, ಆದರೆ ಯು.ಪಿ.ಎಸ್. ಹಾಳಾಗಿದೆ ಎಂದು ತಿಳಿಸಿದರು.
- ನಿರ್ದೇಶಕರು ಸದರಿ ಯು.ಪಿ.ಎಸ್. ರಿಪೇರಿಗೆ ಎಷ್ಟು ಹಣ ಬೇಕೋ ಅದಕ್ಕಾಗಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಮಂಜೂರಿ ಮಾಡಲಾಗುವದೆಂದು ತಿಳಿಸಿದರು.
- ಡಯಟ್‌ನಲ್ಲಿ ನಿರ್ವಹಿಸಬೇಕಾದ ಕೆಲಸ ಕಾರ್ಯಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಸುತ್ತೋಲೆಯನ್ವಯ ಏಳು ವಿಭಾಗಗಳಿಗೆ ವಿಂಗಡನೆ ಮಾಡಿದ್ದಾರೆ. ಅದರೆ ಕಂಪ್ಯೂಟರ್ ಲ್ಯಾಬ್ ಈ ಮೊದಲು ನಡೆಯುತ್ತಿದ್ದ ಡಿ.ಇಡಿ ಕಾಲೇಜು ಕಟ್ಟಡದಲ್ಲಿ ಇದೆ.
- ಸದರಿ ಕಟ್ಟಡವನ್ನು ರಿಪೇರಿಗಾಗಿ ನಿರ್ಮಿತಿ ಕೇಂದ್ರದವರಿಗೆ ವಹಿಸಿಕೊಡಲಾಗಿತ್ತು, ಕಟ್ಟಡವು ರಿಪೇರಿ ಆದ ನಂತರ ಈ ವರೆಗೂ ಡಯಟ್‌ರವರಿಗೆ ಮರುಹಸ್ತಾಂತರಿಸಿರುವದಿಲ್ಲವೆಂದು ಪ್ರಾಂಶುಪಾಲರು ವಿವರಿಸಿದ್ದನ್ನು ಸಭೆಯ ಗಮನಕ್ಕೆ ತಂದರು.
- ನಿರ್ದೇಶಕರವರು, ಪ್ರಾಂಶುಪಾಲರಿಗೆ ಆದಷ್ಟು ಬೇಗ ಡಯಟ್‌ಗೆ ಹಸ್ತಾಂತರ ಮಾಡಿಕೊಳ್ಳುವ ಕುರಿತು ಕ್ರಮವಹಿಸಲು ಸೂಚಿಸಿದರು. ಕ್ರಮ – ಡಯಟ್ ಪ್ರಾಂಶುಪಾಲರು

**ಶ್ರೀ ರಂಗಧಾಮಪ್ಪ ಸಿ.,ಎಸ್.ಎ.ಡಿ.ಪಿ.ಐ., ಭೇಟಿ ನೀಡಿದ ಸಲೆ ಸರಕಾರಿ ಪ್ರೌಢ ಶಾಲೆ, ಸೀತಿಮನಿ ಆರ್.ಎಸ್. ಶಾಲೆಗೆ** ಭೇಟಿ ನೀಡಿದಾಗ ಇಬ್ಬರು ಶಿಕ್ಷಕರು ತಡವಾಗಿ ಶಾಲಾ ಕರ್ತವ್ಯಕ್ಕೆ ಹಾಜರಾದರು.

- ನಿರ್ದೇಶಕರವರು ಸದರಿ ಶಿಕ್ಷಕರವರಿಗೆ ಎಲ್.ಡಬ್ಲ್ಯೂ.ಪಿ. ಮಾಡುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡಿದರು.
- ಸದರಿ ಗ್ರಾಮದಲ್ಲಿ 03 ಹಿರಿಯ ಪ್ರಾಥಮಿಕ ಶಾಲೆಗಳು, 01 ಖಾಸಗಿ ಶಾಲೆ, 01 ಪ್ರೌಢ ಶಾಲೆಗಳಿವೆ, ಇರುವದು. 440 ದಾಖಲಾತಿ, 13 ಜನ ಶಿಕ್ಷಕರು ಇದ್ದಾರೆ.

- ಮುಖ್ಯಗುರುಗಳು ಈ ವರ್ಷದ ಯೋಜನೆ ಸಿದ್ಧಪಡಿಸಿಲ್ಲ, ಸೇತುಬಂಧ ಪರೀಕ್ಷೆ ಮಾಡಿಲ್ಲ.
- ಐ.ಸಿ.ಟಿ-3 ನಲ್ಲಿ ಬ್ಯಾಟರಿ, ಯು.ಪಿ.ಎಸ್. ಕಂಪ್ಯೂಟರ್ ಒದಗಿಸಲಾಗಿದೆ, ಕಂಪ್ಯೂಟರ್ ಚೆನ್ನಾಗಿದೆ – ಮಾಹಿತಿ ಸಿಂಧು ಕಾರ್ಯಕ್ರಮದಲ್ಲಿ ನೀಡಿದ 2 ಕಂಪ್ಯೂಟರ್‌ಗಳನ್ನು ಉಪಯೋಗ ಮಾಡಿದ್ದಾರೆ,
- ಕಂಪ್ಯೂಟರ್ ಲ್ಯಾಬ್ ಸಂಪೂರ್ಣವಾಗಿ ಧೂಳು ತುಂಬಿದೆ.
- ಮುಖ್ಯಗುರುಗಳು ಶಾಲಾವಾರ್ಷಿಕ ಕ್ರಿಯಾ ಯೋಜನೆಯಲ್ಲಿ ತಯಾರಿಸಿಲ್ಲ.
- ಎನ್.ಎಂ.ಎಂ.ಎಸ್. ಪರೀಕ್ಷೆಗೆ ಕಳೆದ ವರ್ಷ ಈ ಶಾಲೆಯಿಂದ ವಿದ್ಯಾರ್ಥಿಗಳನ್ನು ಪರೀಕ್ಷೆ ಒಬ್ಬರನ್ನೂ ನೊಂದಾಯಿಸಿಲ್ಲ.
- ಶಾಲಾ ಶಿಕ್ಷಕರು ಪಡೆದಿರುವ ಆರ್.ಎಂ.ಎಸ್.ಎ. ತರಬೇತಿಗಳ ಮಹಿತಿ ಮುಖ್ಯಶಿಕ್ಷಕರಿಗೆ ಇರುವುದಿಲ್ಲ.
- ವಿಜ್ಞಾನ ಕೇಂದ್ರ ಇದೆ, ರಸಪ್ರಶ್ನೆ ಮಾಡುತ್ತಾರೆ. ಆದರೆ ಸುತ್ತಮುತ್ತ ಶಾಲೆಗಳಿಗೆ ಇದರ ಪ್ರಯೋಜನ ದೊರೆಯುತ್ತಿಲ್ಲ.
- ಈ ಶಾಲೆಯು ಊರಿನ ಮಧ್ಯದಲ್ಲಿದೆ. ಸುತ್ತಲು ಜನವಸತಿ ಮನೆಗಳಿಂದ ಆವೃತವಾಗಿದೆ,ಸುಮಾರು 450 ಮಕ್ಕಳು ಕಲಿಯುತ್ತದ್ದಾರೆ. ಆದರೆ ಬಾಲಕ ಮತ್ತು ಬಾಲಕಿಯರಿಗೆ ಶೌಚಾಲಯ ಮತ್ತು ಮೂತ್ರಾಲಯಗಳು ಕನಿಷ್ಟ ಒಂದೂ ಸಹ ಇರುವುದಿಲ್ಲ.
- ಎರಡು ಉತ್ತಮವಾದ ಆರ್.ಸಿ.ಸಿ. ಕೋಣೆಗಳು ಇವೆ ಇವನ್ನು ಬೀಗ ಹಾಕಿ ಇಡಲಾಗಿದೆ ಯಾವುದೇ ರೀತಿಯಲ್ಲಿ ಬಳಕೆ ಮಾಡುತ್ತಿಲ್ಲ.
- 8ನೇ ತರಗತಿಯಲ್ಲಿ 100 ವಿದ್ಯಾರ್ಥಿಗಳಿದ್ದು ಈ ತರಗತಿಯನ್ನು 2 ವಿಭಾಗ ಮಾಡಿ ಕೋಣೆ ಬಳಕೆ ಮಾಡಲು ತಿಳಿಸಿದೆ.
- ಆಹಾರ ದಾಸ್ತಾನು ಕೋಣೆ ಶುಚಿತ್ವದ ಕೊರತೆಯಿಂದ ಆಹಾರ ವಿಷವಾಗುವ ಅಪಾಯವಿದೆ.
- ಆರ್.ಎಂ.ಎಸ್. ಅನುದಾನ ರೂ.69,578/- ಉಳಿದಿದೆ. ಸಮರ್ಪಕವಾಗಿ ಅದನ್ನು ಬಳಿಸಿಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿ ಅನುಮತಿ ಪಡೆದು ಉಪಯೋಗ ಮಾಡಿಕೊಳ್ಳುವುದು.
- **ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೀತಿಮನಿ ಶಾಲೆ ಭೇಟಿ**,ಶಿಕ್ಷಕರಾದ ಶ್ರೀ ರುದ್ರಪ್ಪ ಏಳಬಣವಿ ಇವರು ಸೇತು ಬಂಧ ಪರೀಕ್ಷ ಪೇಪರ ಮೌಲ್ಯಮಾಪನ ಮಾಡಿಲ್ಲ.

**ಡಯಟ್ ಡಿ.**ಇಡಿಗೆ ಸಂಬಂಧಿಸಿದಂತೆ **ನಿರ್ವ**ಹಿಸಿದ ಕೆಲಸಗಳು

- ಡಿ.ಇಡಿ ಸಂಸ್ಥೆಗಳಿಗೆ ಭೇಟಿ ಕೊಟ್ಟಿದ್ದಾರೆ, ಭೇಟಿ ನಮೂನೆ ಬಳಸುತ್ತಿದ್ದಾರೆ.
- ಐಸಿಟಿ ತರಬೇತಿ ಲ್ಯಾಬ್ ಬಳಕೆ ಮಾಡುತ್ತಿದ್ದಾರೆ. ಬಳಕೆ ಪ್ರಮಾಣ ಹೆಚ್ಚಿಸಲು ತಿಳಿಸಲಾಯಿತು.

**ಶ್ರೀಮತಿ ಅಂಜಲಿನಾ ಕ್ರಿಸ್ಟೀನಾ. ಎಸ್.ಎ.ಡಿ.ಪಿ.ಐ. ಭೇಟಿ ನೀಡಿದ ಶಾಲೆ** ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, **ಧವಳೇಶ್ವರ**:-ಶಾಲೆಯ 280 ದಾಖಲಾತಿಗೆ 228 ಹಾಜರಾತಿ ಇತ್ತು.

- ನಲಿಕಲಿ ತರಗತಿ ಹಳೆ ಚಪ್ಪರ ಹಾಗೆ ಇದೆ, ನಲಿಕಲಿ ತರಗತಿಗಳು ಕ್ರಮಬದ್ದವಾಗಿ ನಡೆಯುತ್ತಿರಲಿಲ್ಲ.
- ಶಾಲೆಯ ಪ್ರತಿ ತರಗತಿ ಕೋಣೆಗಳು ಧೂಳಿನಿಂದ ತುಂಬಿಕೊಂಡಿವೆ. ಹಳೆವಸ್ತುಗಳ ವಿಲೇ ಮಾಡಲು ತಿಳಿಸಿದೆ.

ಕ್ರಮ : ಕ್ಷೇತ್ರ ಶಿಕ್ಷಣಾಧಿಕಾರಿಗಳು.

**ಶ್ರೀಮತಿ ಭಾನುಮತಿ ಎಸ್.ಎ.ಡಿ.ಪಿ.ಐ., ಭೇಟಿ ನೀಡಿದ ಶಾಲೆ**ಸರಕಾರಿ ಕನ್ನಡ ಹೆಣ್ಣು ಹಿರಿಯ ಪ್ರಾಥಮಿಕ ಶಾಲೆ, **ಸೊನ್ನ** ತಾ:ಬೀಳಗಿ,

- ಒಟ್ಟು ವಿದ್ಯಾರ್ಥಿಗಳು 131, ಶಿಕ್ಷಕರು 8, ಪ್ರವೇಶ ಪ್ರಕ್ರಿಯೆ ನಡೆದಿದ್ದು 28 ದಾಖಲಾತಿ ಆಗಿವೆ. 48 ವಿದ್ಯಾರ್ಥಿಗಳು ಗೈರು ಹಾಜರಿದ್ದರು.

- ಮುಖ್ಯೋಪಾಧ್ಯಾಯರು ಈ ಪ್ರದೇಶದಲ್ಲಿ ಇಂದು ಶೇಂಗಾ ಸುಗ್ಗಿ ಮತ್ತು ಮಣ್ಣೆತ್ತಿನ ಅಮವಾಸ್ಯೆಯನ್ನು ಆಚರಿಸಲಾಗುತ್ತದೆ ಆದ್ದರಿಂದ ಕಡಿಮೆ ಹಾಜರಾತಿಗೆ ಕಾರಣವಾಗಿದೆ ಎಂದು ತಿಳಿಸಿದರು.
- ಶಾಲೆಯಲ್ಲಿ ಹಿಂದಿನ ವರ್ಷದ ಚಪ್ಪರ ನಲಿ-ಕಲಿ ಇರುತ್ತದೆ. ಈ ಚಪ್ಪರ ಖಾಲಿ ಮಾಡುವುದು.
- ಶಾಲೆಯಲ್ಲಿ ಅನುಪಯುಕ್ತ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿವೆ,ಅವುಗಳನ್ನು ವಿಲೇವಾರಿ ಮಾಡುವುದು.

  ಕ್ರಮ – ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಬಿ.ಆರ್.ಸಿ.

  **ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೊನ್ನ** ಈ ಶಾಲೆಗೆ ಭೇಟಿ ನೀಡಿ ಪುಸ್ತಕ ಪರಿಚಯ ಬಗ್ಗೆ ಮಾರ್ಗದರ್ಶನ ನೀಡಿದೆ.

- ಡಯಟ್‌ನಲ್ಲಿ 50 ಶಾಲೆಗಳಿಗೆ ಮಿಂಚಿನ ಸಂಚಾರ ಮಾಡಿದ್ದಾರೆ, "ಸರಳ" ಪುಸ್ತಕ ಹಂಚಿರುವರು, ಸ್ಕೂಲ್ ವಿಜಿಟ್ ಫಾರ್ಮ ನೀಡಲು ತಿಳಿಸಲಾಗಿದೆ ಎಂದು ಹೇಳಿದರು.

**ಶ್ರೀಮತಿ ಎಂ.ವಿ.ಕುಮಾರಿ .ಎಸ್.ಎ.ಡಿ.ಪಿ.ಐ., ಭೇಟಿ ನೀಡಿದ ಶಾಲೆ** ಸರಕಾರಿ ಪ್ರಾಥಮಿಕ ಶಾಲೆ, ಮುತ್ತಲದಿನ್ನಿ ತಾ:ಬೀಳಗಿ,

- ಸಿ.ಸಿ.ಇ. ಸಂಬಂಧವಾಗಿ ಸಮಸ್ಯೆ ನಮೂನೆ 7-4 ಗಮನಿಸಲಾಯಿತು.
- ನಲಿಕಲಿ ಚಪ್ಪರ ತುಂಬಾ ಎತ್ತರದಲ್ಲಿ ನಿರ್ಮಿಸಿದ್ದಾರೆ ಇದನ್ನು ಉಪಯೋಗವಾಗುವ ರೀತಿ ಮಾರ್ಪಡಿಸಬೇಕು.
- ಪ್ರಯೋಗಾಲಯ ವಸ್ತು ಪರಿಚಯ ಮಾಡಲು ತಿಳಿಸಲಾಯಿತು, ರೇಡಿಯೋ ಕಾರ್ಯಕ್ರಮ ಸರಿಯಾಗಿ ನಡೆದಿದೆ.

**ನಿರ್ದೇಶಕರು** :-ಸಿ.ಸಿ.ಇ. ಬಗ್ಗೆ ಬಾಗಲಕೋಟ ಅಸೋಶಿಯೇಶನ್‌ನವರು ಸಿ.ಸಿ.ಇ. ಬೇಡ ಎಂಬುದಾಗಿ ಪತ್ರ ಬರೆದಿದ್ದಾರೆ ಏಕೆ ಎಂದು ಕೇಳಿದಾಗ, ಶ್ರೀಮತಿ ವಿಜಯಲಕ್ಷ್ಮೀ ವಡೆಯರ ಉಪನ್ಯಾಸಕರು ಇವರು "0"% ಬಜೆಟ್‌ನಲ್ಲಿ ತರಬೇತಿ ನೀಡಲಾಗಿದೆ ಎಂದು ಸಭೆಗೆ ಉತ್ತರಿಸಿದರು.

**ಶ್ರೀಮತಿ ಕೆ.ಜಿ. ಗೀತಾ ಎಸ್.ಎ.ಡಿ.ಪಿ.ಐ., ಭೇಟಿ ನೀಡಿದ ಶಾಲೆ** ಸರಕಾರಿ ಪ್ರೌಢ ಶಾಲೆ, ಬಾಡಗಂಡಿ ಮತ್ತು ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಬಾಡಗಂಡಿ.

- ಕಳೆದ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶ 93% ಆಗಿದೆ.
- ಮುಖ್ಯ ಗುರುಗಳು "ನನ್ನ ಶಾಲೆ ನನ್ನ ಕನಸು" ಎಂಬ ಕಾರ್ಯಕ್ರಮ ರೂಪಿಸಿ ಶಾಲೆಯನ್ನು ಅತ್ಯಂತ ಸ್ವಚ್ಛ ಹಾಗೂ ಸುಂದರವಾಗಿಟ್ಟುಕೊಂಡಿದ್ದಾರೆ.
- ಹಿರಿಯ ಪ್ರಾಥಮಿಕ ಶಾಲೆಯು ಚೆನ್ನಾಗಿತ್ತು, ಅಕ್ಷರ ದಾಸೋಹ ಅನುಷ್ಠಾನ ಚೆನ್ನಾಗಿದೆ. ಇನ್ನು ಡಯಟ್‌ನಲ್ಲಿ ಚೆನ್ನಾಗಿ ಕೆಲಸ ನಿರ್ವಹಿಸಲು ಮಾರ್ಗದರ್ಶನ ನೀಡಲಾಗಿದೆ.

  **ಶ್ರೀಮತಿ ಉಷಾ ಎಂ.ಡಿ. ಎಸ್.ಎ.ಡಿ.ಪಿ.ಐ., ಭೇಟಿ ನೀಡಿದ ಶಾಲೆ** ಆದರ್ಶ ಸ್ಕೂಲ್, ಟಕ್ಕಳಕಿ ಶಾಲೆ.

- ದಾಖಲಾತಿ 286, ಹೊಸ ಶಿಕ್ಷಕರಿಗೆ ತರಬೇತಿ ಆಗಿಲ್ಲ.
- ಹೇಳಿದರು. ಕಳೆದ ಎಸ್.ಎಸ್.ಎಲ್.ಸಿ. 100% ಫಲಿತಾಂಶವಾಗಿದೆ. ಟೀಚರ್ಸ ಗ್ರೂಪ್ ಸ್ಟಡಿ, ಶನಿವಾರ ರಸಪ್ರಶ್ನೆ ಮಾಡುತ್ತಾರೆ.
- ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಶಿಕ್ಷಕರಿಂದ ಪ್ರೋತ್ಸಾಹವಿದೆ.
- ಜ್ಞಾನ ಲ್ಯಾಬ ಗ್ರಂಥಾಲಯ ಅಗತ್ಯ ಇದೆ, ಸ್ಟುಡೆಂಟ್ ಪ್ರೋಫಾಯಿಲ್ ಇಡಬೇಕು.

  **ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಟಕ್ಕಳಕಿಗೆ ಭೇಟಿ** , 51 ದಾಖಲಾತಿ, 3 ಶಿಕ್ಷಕರು, ನಲಿಕಲಿ ಚಪ್ಪರ ಮತ್ತು ಶಿಕ್ಷಕರ ಪಾಠ ಬೋಧನೆ ಚೆನ್ನಾಗಿತ್ತು.

- 1-3ನೇ ಒಬ್ಬರೇ ಶಿಕ್ಷಕರು, 4-5ನೇ ವರ್ಗ ಮು.ಗು., 6-7 ಒಬ್ಬ ಶಿಕ್ಷಕರು ಇದ್ದರು. ಅಕ್ಷರ ದಾಸೋಹ ಚೆನ್ನಾಗಿತ್ತು.

**ಡಯಟ್ ನಲ್ಲಿ** ಆರ್.ಎಂ.ಎಸ್.ಎ., ಎಸ್.ಟಿ.ಎಫ್. ತರಬೇತಿಗಳನ್ನು ಮಾರ್ಚ ತಿಂಗಳಲ್ಲಿ ಮಾಡಿರುತ್ತಾರೆ.

- ಉಳಿದ ಹಣ ಮರುಭರಣಾ ಮಾಡಬೇಕು, ಬಳಕೆ ಪ್ರಮಾಣಪತ್ರ ನೀಡಿರುವುದಿಲ್ಲ. –ಕ್ರಮ ಡಯಟ್ ಪ್ರಾಂಶುಪಾಲರು

**ಶ್ರೀಮತಿ ದ್ರಾಕ್ಷಾಯಣಿ ಎಂ.ಎಸ್. ಎಸ್.ಎ.ಡಿ.ಪಿ.ಐ., ಭೇಟಿ ನೀಡಿದ ಶಾಲೆ,**ಸರಕಾರಿ ಪ್ರೌಢಶಾಲೆ, ಬೀಳಗಿ ಕ್ರಾಸ್

- ಐ.ಸಿ.ಟಿ.–2 ಪೂರೈಕೆಯಾದ ಕಂಪ್ಯೂಟರ್, ಬ್ಯಾಟರಿ ಕೆಟ್ಟು ಹೋಗಿವೆ.
- ಪೂರ್ವ ಪರೀಕ್ಷೆ ಆಗಿದೆ. ಇಂಗ್ಲೀಷ ಶಿಕ್ಷಕರ ಹುದ್ದೆ ಮಂಜೂರಿ ಇಲ್ಲ ಎಂಬುದನ್ನು ಮಾನ್ಯ ನಿರ್ದೇಶಕರ ರವರ ಅವಗಾಹನೆ ತಂದಾಗ , ಜಿಲ್ಲೆಯಲ್ಲಿ ಹೆಚ್ಚುವರಿಯಿಂದ ಖಾಲಿ ಇರುವ ಕಲಾ ಹುದ್ದೆಗಳನ್ನು ಇಂಗ್ಲೀಷ ಭಾಷಾ ಶಿಕ್ಷಕ ಹುದ್ದೆಗೆ ಪರಿವರ್ತಿಸಿ ಉಪಯೋಗ ಮಾಡಿಕೊಳ್ಳಲು ಸೂಚಿಸಿದರು. –ಕ್ರಮ ಡಿ.ಡಿ,ಪಿ,ಐ.
- ಕೆ.ಜಿ.ಬಿ.ವಿ. ಮತ್ತು ಆರ್.ಎಂ.ಎಸ್.ಎ. ಶಾಲೆ ಬೀಳಗಿ ಶಾಲೆಯಲ್ಲಿ 147 ಮಕ್ಕಳು ಹಾಸ್ಟೇಲ್‌ನಲ್ಲಿದ್ದಾರೆ.
- ಈ ಹಾಸ್ಟೇಲ್‌ಗೆ ಹೆಚ್ಚಿನ ಅನುದಾನ ಬಿಡುಗಡೆಯಾಗುವದರಿಂದ ಉಸ್ತುವಾರಿಗಾಗಿ ಕನಿಷ್ಟ ಗ್ರೂಪ್ "ಬಿ" ಹುದ್ದೆ ನೀಡುವ ಅಗತ್ಯವಿದೆ.

**ನಿರ್ದೇಶಕರವರು** ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ವರ್ಷ ರೂಪಿಸಿಕೊಂಡಿರುವ ಶೈಕ್ಷಣಿಕ ಬಲವರ್ಧನಾ ಯೋಜನೆಯನ್ನು ಕೇಳಲಾಗಿ– ಬೀಳಿಗಿ ಬಿ.ಇ.ಓ.ರವರು

- 10 ಅಂಶದ ಕಾರ್ಯಕ್ರಮ ಕುರಿತು "ನನ್ನ ಶಾಲೆ ನನ್ನ ಕನಸು" 3 ವರ್ಷದಲ್ಲಿ ಮು.ಗು. ರವರು ಮಾಡುವದು.
- ಸಿ.ಆರ್.ಪಿ. ಯವರು ಪ್ರಾರ್ಥನೆಗೆ ಇರಬೇಕು, ರಸಪ್ರಶ್ನೆ ಕಾರ್ಯಕ್ರಮ, ಪ್ರಾರ್ಥನೆ ಮುಗಿದ ಮೇಲೆ 5 ನಿಮಿಷ ಧ್ಯಾನ ಮಾಡಿಸುವದು. ಈ ಧ್ಯಾನ್ಯದಿಂದ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಬರುವದೊಂದಿಗೆ ಪಾಠ ಪ್ರವಚನವನ್ನು ಏಕಚಿತ್ತದಿಂದ ಕೇಳುವದರೊಂದಿಗೆ, ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದಾಗಿದೆ ಎಂದು ತಿಳಿಸಿದರು.
- ಬಿ.ಇ.ಓ. ಹುನಗುಂದ ತಮ್ಮ ತಾಲ್ಲೂಕಿನ ಶಾಲೆಗಳಲ್ಲಿ ಎಲ್ಲ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳು ಲೋಪದೋಷ ರಹಿತ ಬರವಣಿಗೆಯನ್ನು ಮಾಡುವ ಹಾಗೇ ಮಾಡುವದಾಗಿ ಅದಕ್ಕಾಗಿ 3 ತಿಂಗಳ ಕಾಲಾವಕಾಶ ಬೇಕು ಎಂದು ಕೋರಿದರು.
- ಮಗ್ಗಿಗಳನ್ನು ಕಂಠಪಠ ಮಾಡಿಸುವದು 1ನೇ ತರಗತಿ 20 ರವರೆಗೆ, 2ನೇ ತರಗತಿಯವರಿಗೆ 25, 5ನೇ ತರಗತಿಗೆ 50–70ರ ವರೆಗೆ ಮಗ್ಗಿಯನ್ನು ಬಾಯಿಪಾಠ ಮಾಡಿಸುವುದು.
- ಅದರಂತೆ ಇಂಗ್ಲೀಷ ಲೋಪದೋಷ ರಹಿತ ಬರವಣಿಗೆ ಮಾಡಿಸುವದಾಗಿ ತಿಳಿಸಿದರು.

**ನಿರ್ದೇಶಕರು** ಒಂದು ವಾರದ ಕಾರ್ಯಕ್ರಮ ರೂಪಿಸಿ ಹಳೆ ಸಾಮಾನುಗಳ ಮತ್ತು ಉಪಯೋಗಕ್ಕೆ ಬಾರದ ವಸ್ತುಗಳ ಪಟ್ಟಿ ಮಾಡಿ ಅವುಗಳನ್ನು ಸುತ್ತೋಲೆ ಪ್ರಕಾರ ವಿಲೆವಾರಿ ಮಾಡಲು / ಕಡಿಮೆಗೊಳಿಸಲು ಹಾಗೂ ಶಾಲೆಯ ಒಳಾಂಗಣ, ಹೊರಾಂಗಣ ಸ್ವಚ್ಛವಾಗಿ ಇಟ್ಟುಕೊಳ್ಳಲು ತಿಳಿಸಿದರು.

- 10 ಅಂಶಗಳ ಕಾರ್ಯಕ್ರಮವನ್ನು ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಸಮರ್ಪಕವಾಗಿ ಜಾರಿಗೆ ತರುವುದು.
- ಐ.ಸಿ.ಟಿ.–1,2,3 ಕುರಿತು ವಿದ್ಯುತ್ ಬಿಲ್ಲುನ್ನುಗಳನ್ನು ಶಾಲಾ ಸಂಚಿತ ನಿಧಿಯಿಂದ ಮುಂಗಡಪಡೆದು ತುಂಬುವು. ಈ ಬಾಬ್ತು ಸರ್ಕಾರದಿಂದ ಅನುದಾನ ಬಂದಾಗ ಬಿಡುಗಡೆ ಮಾಡಲಾಗುವದು.
- ವಿಜ್ಞಾನ ವಸ್ತುಪ್ರದರ್ಶನ, ನಾಟಕ ಮತ್ತು ವಿಚಾರ ಘೋಷ್ಠಿಗಳನ್ನು ಎಲ್ಲಾ ಶಾಲೆಗಳ ಹಂತದಲ್ಲಿ ಮಾಡಲು ಸೂಚಿಸಿದರು.
- ಎಜ್ಯುಸ್ಯಾಟ್ ಅಳವಡಿಸಲು ಶಾಲೆಗಳಿಂದ ಪ್ರಸ್ತಾವನೆ ಬಂದರೆ ಅನುಮತಿ ನೀಡಲಾಗುವುದು .ಕ್ರಮ ಬಿ.ಇ.ಓ.ರವರಿಗೆ ಶಾಲಾ ಪಟ್ಟಿ ನೀಡಲು ತಿಳಿಸಿದರು.
- ಸಿ.ಸಿ.ಇ. ಗಾಗಿ ಐ.ಐ.ಎಂ.ಬಿ. ತಂತ್ರಾಂಶ ತಯಾರಿಸಲಾಗಿದ್ದು, 1 ಬಾರಿ ಮಕ್ಕಳ ಡೇಟಾ ಎಂಟ್ರಿ ಮಾಡಿದರೆ ರಿಪೋರ್ಟ ಜನರೇಟ್ ಆಗುವುದು. ಇದನ್ನು ಬಳಸಲು ಸೂಚಿಸಿದರು.
- ಲ್ಯಾಬ್‌ಟಾಪ್ ಶಾಲಾ ಹಂತದಲ್ಲಿ ಖರೀದಿಸಲು ಪ್ರಸ್ತಾವನೆ ಸಲ್ಲಿಸಿದಲ್ಲಿ ಅನುಮತಿ ನೀಡಲಾಗುವದು.
- ಆಪ್ತ ಸಲಹಾ ಕೇಂದ್ರ : (ವೃತ್ತಿ ಮಾರ್ಗದರ್ಶನ) ಕುರಿತು ಎಲ್ಲ ಬಿ.ಇ.ಓ.ರವರಿಗೆ ಗಮನಹರಿಸಲು ಸೂಚಿಸಿದರು.
- ಎನ್.ಟಿ.ಎಂ.ಎಂ.ಎಸ್. ಫೀಜ್ ಕಡಿಮೆ ಮಾಡಿದೆ. ಶಿಕ್ಷಕರಿಗೆ ತರಬೇತಿ ನೀಡಲಾಗುವುದು.
- ಇವರನ್ನು ಬಳಸಿಕೊಂಡು ತಮ್ಮ ಜಿಲ್ಲೆ/ತಾಲ್ಲೂಕಿನವರಿಗೆ ಡಯಟ್ ಮತ್ತು ಡಿ.ಡಿ.ಪಿ.ಐ. ಆಡಳಿತ ಇವರ ಹಂತದಲ್ಲಿ ತರಬೇತಿ ನೀಡುವುದು.

- ಈಗಾಗಲೇ ಆರ್.ಎಂ.ಎಸ್.ಎ. ತರಬೇತಿ ಪಡೆದ ಶಿಕ್ಷಕರು ತರಬೇತಿ ಪಡೆಯದೇ ಇರುವ ಶಿಕ್ಷಕರ ಬೋಧನೆ ಮಾಡುವುದನ್ನು ನೋಡಬೇಕು – ಕ್ರಮ ಡಯಟ್ .
- ಸಿ.ಎ.ಎಲ್.ಸಿ. ಶಾಲೆಗಳಿಗೆ ಕಂಪ್ಯೂಟರ್ ನೀಡಲಾಗಿದೆ, (ಕನ್ನಡ, ಇಂಗ್ಲೀಷ ಮಾಧ್ಯಮದಲ್ಲಿ ಮಾತ್ರ ಸಿ.ಡಿ. ಇರುವ ಪ್ರಯುಕ್ತ) ಉರ್ದು ಶಾಲೆಗಳು ಉರ್ದು ಭಾಷೆಯ ಸಿ.ಡಿ.ಗಳಿಗಾಗಿ ಮನವಿ ಇದೆ.
- ಬಿ.ಆರ್.ಪಿ. ಗಳ ಪ್ರವಾಸ ಭತ್ಯೆ, ದಿನಭತ್ಯೆ ಕುರಿತು ಚರ್ಚಿಸಲಾಯಿತು.
- ಶೌಚಾಲಯ/ಕುಡಿಯುವ ನೀರು ಎಲ್ಲ ಶಾಲೆಗಳಲ್ಲಿ ಇದೆ ಎನ್ನುವ ಕುರಿತು ಇಲಾಖೆಯು ಸರ್ವೋಚ್ಛ ನ್ಯಾಯಾಲಯಕ್ಕೆ ಶ್ವೇತಪತ್ರ ನೀಡಿದೆ. ಈ ಬಗ್ಗೆ ವಯಕ್ತಿಕವಾಗಿ ಕಾಳಜಿವಹಿಸುವಂತೆ ಬಿ.ಇ.ಓ.ರವರಿಗೆ ತಿಳಿಸಲಾಯಿತು.
- ಅಕ್ಷರ ದಾಸೋಹ – ಸ್ವಚ್ಛತೆಗೆ ಗಮನಹರಿಸಬೇಕು.
- ಸ್ವಚ್ಛತಾ ಆಂದೋಲನಾದಡಿ ಬಿ.ಇ.ಓ.ಕಚೇರಿ ಮತ್ತು ಸಿ.ಆರ್.ಸಿ. ಕಚೇರಿ ಶುಚಿಯಾಗಿಟ್ಟುಕೊಳ್ಳಲು ತಿಳಿಸಲಾಯಿತು.
- ಮೊಬೈಲ್‌ನ್ನು ತರಗತಿ ಕೊಠಡಿಯಲ್ಲಿ ಉಪಯೋಗಿಸಬಾರದು.
- ಪ್ರತಿ 2ವರ್ಷಕ್ಕಾದರೂ ಶಾಲೆ ತಪಾಸಣೆ ಮಾಡಬೇಕು, ಸರಕಾರಿ ಪ್ರೌಢಶಾಲೆಗಳ ನಮುಖ್ಯಶಿಕ್ಷಕರು ಮತ್ತು ಗುಮಾಸ್ಥರನ್ನು ಬಳಸಿಕೊಂಡು ಎಪ್ರೀಲ್–ಮೇ ನಲ್ಲಿ ತಪಾಸಣೆ ಮಾಡಿಸುವುದು. ಕ್ರಮ– ಬಿ.ಇ.ಓ.
- ಎಲ್ಲ ಬಿ.ಇ.ಓ. ರವರು 20 ಶಾಲೆಗಳನ್ನು ಪಟ್ಟಿ ಮಾಡಿ ಎಲ್ಲ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಶಾಲೆಗಳ ಪಿ.ಪಿ.ಟಿ. ಮಾಡಿ. ಅದೇ ತರಹ ಮೂಲಭೂತ ಸೌಲಭ್ಯ ಹೊಂದದೇ ಇರುವ ಶಾಲೆಗಳ ಪಿ.ಪಿ.ಟಿ. ಮಾಡಿ ಶಾಲೆಗಳ ಅಭಿವೃಧ್ಧಿ ಮಾಡಲು ತಿಳಿಸಿದರು.

  ಶ್ರೀಎನ್.ಎಚ್.ನಾಗೂರ ಡಿ.ವಾಯ್.ಪಿ.ಸಿ. ಎಸ್.ಎಸ್.ಎ. ಬಾಗಲಕೋಟ ರವರು ಸಭೆಯಲ್ಲಿ ವಂದನಾರ್ಪಣೆ ಮಾಡಿದರು. ನಂತರ ಸಭೆಯು ಮುಕ್ತಾಯವಾಯಿತು.

(ಎಸ್. ಜಯಕುಮಾರ್)
ನಿರ್ದೇಶಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
ಬೆಂಗಳೂರು.–85

ರಿಗೆ,

1) ಪ್ರಾಂಶುಪಾಲರು, ಡಯಟ್ ಇಲಕಲ್, ಬಾಗಲಕೋಟೆ ಜಿಲ್ಲೆ, ಇವರ ಮುಂದಿನ ಅಗತ್ಯ ಕ್ರಮಕ್ಕೆ ಮತ್ತು ಅನುಪಾಲನಾ ವರದಿ ನೀಡುವ ಕ್ರಮಕ್ಕಾಗಿ.
2) ಉಪನಿರ್ದೇಶಕರು ಸಾ.ಶಿ.ಇ, ಬಾಗಲಕೋಟೆ ಜಿಲ್ಲೆ, ರವರಿಗೆ ಮುಂದಿನ ಕ್ರಮಕ್ಕಾಗಿ.
3) ಬಾಗಲಕೋಟೆ ಜಿಲ್ಲೆ, ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.
4) ಬಾಗಲಕೋಟೆ ಜಿಲ್ಲೆ, ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ.

ಮಾಹಿತಿಗಾಗಿ

1) ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಅವಗಾಹನೆಗೆ ವಂದನಾಪೂರ್ವಕವಾಗಿ ಸಲ್ಲಿಸಿದೆ.
2) ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು ಸರ್ವಶಿಕ್ಷಣ ಅಭಿಯಾನ , ಬೆಂಗಳೂರು ಇವರ ಮಾಹಿತಿಗಾಗಿ ಸಲ್ಲಿಸಿದೆ.